## ಕರ್ನಾಟಕ ಸರ್ಕಾರ

ಸಂಖ್ಯೆ:ಕಾಶಿಇ:02:ಸುತ್ತೋಲೆ:2017-18

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:25-04-2017

## ಸುತ್ತೋಲೆ

**ವಿಷಯ: ಯು.ಜಿ.ಸಿ. ಬಾಕಿ ಪಾವತಿಗೆ ಬಿಡುಗಡೆ ಮಾಡಲಾದ ಅನುದಾನಕ್ಕೆ ಬಳಕೆ ಪ್ರಮಾಣ ಪತ್ರ ಸಲ್ಲಿಸುವ ಬಗ್ಗೆ**

* * * * *

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, 2006ರ ಪರಿಷ್ಕೃತ ಯು.ಜಿ.ಸಿ. ಬಾಕಿ ಪಾವತಿ ಸಂಬಂಧ ಈ ಕಛೇರಿಯ ವ್ಯಾಪ್ತಿಗೆ ಒಳಪಡುವ ಪ್ರಾದೇಶಿಕ ಕಛೇರಿ ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮತ್ತು ನಿವೃತ್ತಿ ಹೊಂದಿದ ಎಲ್ಲಾ ವರ್ಗದವರಿಗೆ 2014-15 ರಿಂದ 2016-17ನೇ ಸಾಲಿನವರೆಗೆ ವಿವಿಧ ದಿನಾಂಕಗಳ ಆದೇಶಗಳಲ್ಲಿ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಅನುದಾನ ಬಿಡುಗಡೆ ಆದೇಶದಲ್ಲಿ ಮತ್ತು ಹಲವಾರು ಬಾರಿ ಸುತ್ತೋಲೆಗಳಲ್ಲಿ ಅನುದಾನ ಬಳಕೆ ಮಾಡಿಕೊಂಡಿರುವ ಬಗ್ಗೆ ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸಲು ಸೂಚಿಸಲಾಗಿರುತ್ತದೆ. ಈ ಕುರಿತು ಪರಿಶೀಲಿಸಲಾಗಿ ಹಲವಾರು ಕಾಲೇಜಿನಿಂದ ಇಲ್ಲಿಯವರೆವಿಗೂ ಬಳಕೆ ಪ್ರಮಾಣ ಪತ್ರ ಸಲ್ಲಿಸದಿರುವುದು ಕಂಡುಬಂದಿರುತ್ತದೆ. ಅಲ್ಲದೇ ಮಹಾಲೇಖಪಾಲರ ಕಛೇರಿಯಿಂದ ಲೆಕ್ಕ ತಪಾಸಣೆಗಾಗಿ ಮೇ-2017ರ ಮೊದಲ ವಾರದಲ್ಲಿ ಕೇಂದ್ರ ಕಛೇರಿಗೆ ಭೇಟಿ ನೀಡಲಿದ್ದು ಬಳಕೆ ಪ್ರಮಾಣ ಪತ್ರವನ್ನು ಪರಿಶೀಲನೆಗಾಗಿ ಸಲ್ಲಿಸಬೇಕಾಗಿರುತ್ತದೆ.

ಆದುದರಿಂದ ಕೇಂದ್ರ ಕಛೇರಿಯಿಂದ ಇದೂವರೆವಿಗೂ ಯುಜಿಸಿ ಬಾಕಿ ಪಾವತಿಸಲು ಬಿಡುಗಡೆ ಮಾಡಲಾದ ಅನುದಾನವನ್ನು ಬಳಕೆ ಮಾಡಿಕೊಂಡಿರುವ ಮಾಹಿತಿಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಭರ್ತಿ ಮಾಡಿ, ಸದರಿ ಮಾಹಿತಿಯ ಹಾರ್ಡ್ ಪ್ರತಿಯನ್ನು ದಿನಾಂಕ:02-05-2017 ರೊಳಗಾಗಿ ಈ ಕಛೇರಿಗೆ ಸಲ್ಲಿಸಲು ಹಾಗೂ ಸಾಫ್ಟ್ ಪ್ರತಿಯನ್ನು ಇ-ಮೇಲ್ ವಿಳಾಸ:dce.2006ugc@gmail.com ಗೆ ಕಳುಹಿಸುವಂತೆ ಸೂಚಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಗೆ,

1. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಬೆಂಗಳೂರು, , ಮೈಸೂರು, ಶಿವಮೊಗ್ಗ, ಮಂಗಳೂರು ಧಾರವಾಡ, ಮತ್ತು ಕಲಬುರಗಿ
2. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ
3. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ,ಬೆಂಗಳೂರು – ಇವರಿಗೆ ಸದರಿ ಸುತ್ತೋಲೆಯನ್ನು ಇಲಾಖಾ ಅಂತರ್ ಜಾಲದಲ್ಲಿ ಪ್ರಕಟಿಸಲು
4. ಕಛೇರಿ ಪ್ರತಿ

## ನಮೂನೆ

## 2006ರ ಪರಿಷ್ಕೃತ ಯುಜಿಸಿ ಬಾಕಿ ವೇತನ ಅನುದಾನ ಬಳಕೆ ಪ್ರಮಾಣ ಪತ್ರ

| ಕ್ರಮ ಸಂಖ್ಯೆ | ವರ್ಷ | ಕೇಂದ್ರ ಕಛೇರಿಯಿಂದ ಅನುದಾನ ಬಿಡುಗಡೆ ಆದೇಶ ಸಂಖ್ಯೆ ಮತ್ತು ದಿನಾಂಕ | ಬಳಕೆಯಾದ ಮೊತ್ತ | ಷರಾ |
|---|---|---|---|---|
| 1 | 2014-15 | | | |
| 2 | 2015-16 | | | |
| 3 | 2016-17 | | | |
| ಒಟ್ಟು | | | | |

ಜಂಟಿನಿರ್ದೇಶಕರು/ಪ್ರಾಂಶುಪಾಲರ ಸಹಿ

**ವಿಶೇಷ ಸೂಚನೆ:**

1) ಬಳಕೆಯಾದ ಮೊತ್ತದ ವಿವರವನ್ನು ನೀಡುವಾಗ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಮತ್ತು ನಿವೃತ್ತಿ ಹೊಂದಿರುವರಿಗೆ ಪಾವತಿಸಿರುವ ಮೊತ್ತವನ್ನು ಒಳಗೊಂಡಂತೆ ನೀಡತಕ್ಕದ್ದು.
2) ವರ್ಗಾವಣೆಗೊಂಡಿರುವ ಬೋಧಕರಿಗೆ ಸಂಬಂಧಿಸಿದಂತೆ ಯಾವ ಯಾವ ಅವಧಿಗೆ ಯುಜಿಸಿ ಬಾಕಿಯನ್ನು ಪಾವತಿಸಲಾಗಿರುವ ಮೊತ್ತದ ವಿವರವನ್ನು ಆಯಾ ಕಾಲೇಜಿನಿಂದಲ್ಲೇ ನೀಡತಕ್ಕದ್ದು.
3) ಮೇಲ್ಕಂಡ ಮಾಹಿತಿಯನ್ನು Excel sheet ನಲ್ಲಿ ಸಾಫ್ಟ್ ಮಾಹಿತಿಯನ್ನು ಸಲ್ಲಿಸತಕ್ಕದ್ದು.
4) ಈಗಾಗಲೇ ಮೇಲ್ಕಂಡ ಅವಧಿಗೆ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದರು ಸಹ ಮೇಲ್ಕಂಡ ನಮೂನೆಯಲ್ಲಿ ಬಳಕೆ ಪ್ರಮಾಣ ಪತ್ರವನ್ನು ನೀಡತಕ್ಕದ್ದು.